

‘ಟೆಸ್ಟ್’ ಸ್ಪೆಷಲಿಸ್ಟ್ ಪೂಜಾರ ಪರದಾಡತೊಡಗಿದರೆ...

ಈ ಸಾಧನೆ ಮೂಡಿಬಂದಿದ್ದು ಕೂಡ ಜೂನ್ ಮಾಹೆಯಲ್ಲಿಯೇ!

ಏಕದಿನ ವಿಶ್ವಕಪ್, ಟಿ–20 ವಿಶ್ವಕಪ್, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಮತ್ತು ಚಾಂಪಿಯನ್ಸ್ ಟ್ರೋಫಿ ಎನ್ನುವ ಪ್ರತಿಷ್ಠಿತ ನಾಲ್ಕು ಟೂರ್ನಿಗಳನ್ನು ಐಸಿಸಿ ನಡೆಸಿಕೊಂಡು ಬರುತ್ತಿದೆ. ಡಬ್ಲ್ಯುಟಿಸಿ ಹೊರತುಪಡಿಸಿ ಉಳಿದ ಎಲ್ಲಾ ಟೂರ್ನಿಗಳಲ್ಲಿಯೂ ಭಾರತ ಪ್ರಶಸ್ತಿ ಜಯಿಸಿದೆ. ಈ ಬಾರಿ ಚಾಂಪಿಯನ್ ಆಗಲು ಇದ್ದ ಅವಕಾಶ ಕಳೆದುಕೊಂಡು ಐಸಿಸಿ ಟ್ರೋಫಿಗೆ ಮತ್ತೆ ಕಾಯುವಂತೆ ಮಾಡಿದೆ. ಹತ್ತು ವರ್ಷಗಳ ಹಿಂದೆ ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿದ ಬಳಿಕ ಈ ಪ್ರಶಸ್ತಿ ಗೆಲ್ಲುವ ಕನಸು ಈಡೇರಿಲ್ಲ. ಡಬ್ಲ್ಯುಟಿಸಿಯಲ್ಲಿ ಮೊದಲ ಬಾರಿಗೆ ಪ್ರಶಸ್ತಿ ಗೆದ್ದ ಆಸ್ಟ್ರೇಲಿಯಾ ಐಸಿಸಿಯ ಎಲ್ಲಾ ಟೂರ್ನಿಗಳಲ್ಲಿ ಟ್ರೋಫಿ ಮುಡಿಗೇರಿಸಿಕೊಂಡ ಮೊದಲ ಮತ್ತು ಏಕೈಕ ತಂಡವೆನಿಸಿಕೊಂಡಿದೆ.

ಆಸ್ಟ್ರೇಲಿಯಾ ಐದು ಬಾರಿ ಏಕದಿನ ವಿಶ್ವಕಪ್, ಎರಡು ಸಲ ಚಾಂಪಿಯನ್ಸ್ ಟ್ರೋಫಿ, ಒಂದು ಸಲ ಟಿ–20 ವಿಶ್ವಕಪ್ ಮತ್ತು ಒಂದು ಸಲ ಡಬ್ಲ್ಯುಟಿಸಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರೆ, ಭಾರತ ತಂಡ ಎರಡು ಬಾರಿ ಏಕದಿನ ವಿಶ್ವಕಪ್, ಒಂದು ಬಾರಿ ಟಿ–20 ವಿಶ್ವಕಪ್ ಹಾಗೂ ಎರಡು ಸಲ ಚಾಂಪಿಯನ್ಸ್ ಟ್ರೋಫಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ. ವೆಸ್ಟ್ ಇಂಡೀಸ್ ಕೂಡ ಇಷ್ಟೇ ಬಾರಿ ಐಸಿಸಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಹಿಂದಿನ ಹತ್ತು ಸರಣಿಗಳಲ್ಲಿ ಆರರಲ್ಲಿ ಗೆದ್ದು, ಎರಡನ್ನು ಡ್ರಾ ಮಾಡಿಕೊಂಡಿದೆ. ‘ಬಾರ್ಡರ್ – ಗಾವಸ್ಕರ್’ ಸರಣಿಯಲ್ಲಿ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಏಕದಿನ, ಟೆಸ್ಟ್ ಮತ್ತು ಟಿ–20 ಈ ಮೂರೂ ಮಾದರಿಗಳಲ್ಲಿ ಸೋಲಿಸಿದ್ದರಿಂದ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತ ಗೆಲ್ಲುವ ನೆಚ್ಚಿನ ತಂಡವಾಗಿತ್ತು. ‘ಮೊದಲ ಇನಿಂಗ್ಸ್‌ನಲ್ಲಿ ಕಳಪೆ ಬೌಲಿಂಗ್ ನಮ್ಮ ಸೋಲಿಗೆ ಕಾರಣವಾಯಿತು’ ಎನ್ನುವುದನ್ನು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ.

ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಡಿದ ಭಾರತದ ಬಹುತೇಕ ಆಟಗಾರರು ‘ಮಿಲಿಯನ್ ಡಾಲರ್ ಬೇಬಿ’ ಐಪಿಎಲ್‌ನಲ್ಲಿ ಆಡಿದ ಅನುಭವಿಗಳು. ಐಪಿಎಲ್ ಯುವ ಆಟಗಾರರಿಗೆ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಲು ವೇದಿಕೆಯಾಗುತ್ತಿದೆ. ತಿಂಗಳಾನುಗಟ್ಟಲೆ ನಡೆಯುವ ಐಪಿಎಲ್ ಟೂರ್ನಿಗೆ ಹೊಂದಿಕೆಯಾಗುವ ರೀತಿಯಲ್ಲಿ ಅಭ್ಯಾಸ ಮಾಡಿ ಟೆಸ್ಟ್‌ನಲ್ಲಿನ ಸವಾಲು ಎದುರಿಸಲು ಭಾರತ ಸಫಲವಾಗಲಿಲ್ಲ. ಮಹತ್ವದ ಟೂರ್ನಿಗೆ ‘ಯುದ್ಧಕಾಲದಲ್ಲೇ ಶಸ್ತ್ರಾಭ್ಯಾಸ’ ಮಾಡಿದ್ದು ಕೂಡ ಸೋಲಿಗೆ ಕಾರಣವಾದ ಪ್ರಮುಖ ಅಂಶಗಳಲ್ಲಿ ಒಂದು. ವಿರಾಟ್ ಕೊಹ್ಲಿ, ಶುಭಮನ್ ಗಿಲ್, ರವೀಂದ್ರ ಜಡೇಜ, ರಿಷಭ್ ಪಂತ್, ಜಸ್‌ಪ್ರೀತ್ ಬೂಮ್ರಾ ಮತ್ತು ಮಹಮ್ಮದ್ ಸಿರಾಜ್ ಇಂಥ ಕೆಲ ಆಟಗಾರರು ಮಾತ್ರ ಕ್ರಿಕೆಟ್ ಎಲ್ಲ ಮಾದರಿಗಳಿಗೂ ಹೊಂದಿಕೊಂಡು ಆಡುವ ಕೌಶಲ ಹೊಂದಿದ್ದಾರೆ. ಟೆಸ್ಟ್ ಪರಿಣತ ಬ್ಯಾಟ್ಸ್‌ಮನ್ ಚೇತೇಶ್ವರ ಪೂಜಾರ ಮಹತ್ವದ ಪಂದ್ಯದ ಎರಡೂ ಇನಿಂಗ್ಸ್ ಸೇರಿ ಗಳಿಸಿದ್ದು 41 ರನ್ ಮಾತ್ರ.

ಮೊದಲೆಲ್ಲ ಇಂಗ್ಲೆಂಡ್ ಪ್ರವಾಸವೆಂದರೆ

## ಡಬ್ಲ್ಯುಟಿಸಿ; ಮೂರನೇ ಆವೃತ್ತಿ ಶುರು

ಡಬ್ಲ್ಯುಟಿಸಿ ಎರಡನೇ ಆವೃತ್ತಿಯ ಫೈನಲ್ ಅಂತಿಮಗೊಳ್ಳುತ್ತಿದ್ದಂತೆ ಮೂರನೇ ಆವೃತ್ತಿ ಈಗಾಗಲೇ ಆರಂಭವಾಗಿದೆ. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡವು ಆ್ಯಶಸ್ ಸರಣಿಯಲ್ಲಿ ಮುಖಾಮುಖಿಯಾಗುವ ಮೂಲಕ ಈ ಚಾಂಪಿಯನ್‌ಷಿಪ್ ಶುರುವಾಗಲಿದೆ.

ಭಾರತ ತಂಡವು ವೆಸ್ಟ್ ಇಂಡೀಸ್ ಎದುರು ಜುಲೈನಲ್ಲಿ ಟೆಸ್ಟ್ ಸರಣಿ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ. ವಿಂಡೀಸ್ ಎದುರಿನ ಸರಣಿಯಲ್ಲಿ ಭಾರತ ತಂಡ ಜುಲೈ 12ರಿಂದ 16ರ ತನಕ ಡಾಮ್ನಿಕಾದಲ್ಲಿ ಮತ್ತು ಜುಲೈ 20ರಿಂದ 24ರ ತನಕ ಟ್ರಿನಿಡಾಡ್‌ನಲ್ಲಿ ಪಂದ್ಯ ಆಡಲಿವೆ.

ಬಳಿಕ ಭಾರತ ತಂಡ ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಬಾಂಗ್ಲಾದೇಶ, ನ್ಯೂಜಿಲೆಂಡ್, ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿ ಆಡಲು ಆಸ್ಟ್ರೇಲಿಯಾ ವಿರುದ್ಧ ಪಂದ್ಯಗಳನ್ನಾಡಲಿದೆ. ಇದು ಸುದೀರ್ಘ ಅವಧಿಯ ಟೂರ್ನಿಯಾದರೂ ಟೆಸ್ಟ್ ಕ್ರಿಕೆಟ್ ಉಳಿಸುವ ಮತ್ತು ಬೆಳೆಸುವ ನಿಟ್ಟಿನಲ್ಲಿ ಮಾದರಿ ಕ್ರಮವಾಗಿದೆ. ಇಂಥ ಪ್ರತಿಷ್ಠಿತ ಟೂರ್ನಿಗಳಲ್ಲಿ ಕ್ರಿಕೆಟ್ ಲೋಕದ ‘ಲಿಲ್ಲಿಪುಟ್’ಗಳಾದ ಅಫ್ಘಾನಿಸ್ತಾನ, ಐರ್ಲೆಂಡ್‌ನಂಥ ತಂಡಗಳಿಗೂ ಅವಕಾಶ ಕೊಟ್ಟರೆ ಹೊಸ ತಂಡಗಳಿಗೂ ಪ್ರೋತ್ಸಾಹ ನೀಡಿದಂತಾಗುತ್ತದೆ.

ಡಬ್ಲ್ಯುಟಿಸಿಯ ಮೊದಲ ಎರಡೂ ಆವೃತ್ತಿಗಳ ಫೈನಲ್ ಪಂದ್ಯಗಳು ಇಂಗ್ಲೆಂಡ್‌ನಲ್ಲಿ ನಡೆದಿವೆ. 2025ರಲ್ಲಿ ನಡೆಯುವ ಮೂರನೇ ಆವೃತ್ತಿಯ ಫೈನಲ್ ಹೋರಾಟವನ್ನು ಲಾರ್ಡ್ಸ್‌ನಲ್ಲಿ ನಿಗದಿ ಮಾಡಲಾಗಿದೆ. ಪ್ರತಿ ಬಾರಿಯೂ ಇಂಗ್ಲೆಂಡ್‌ನಲ್ಲಿಯೇ ಯಾಕೆ ಅಂತಿಮ ಪಂದ್ಯ ಎನ್ನುವುದು ಕ್ರಿಕೆಟ್ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ಬಗ್ಗೆ ಐಸಿಸಿ ಚಿಂತನೆ ನಡೆಸುವ ಅಗತ್ಯವಿದೆ.



ನಿರೀಕ್ಷೆಗಳ ಭಾರಕ್ಕೆ ಬಸವನ ಹುಳುವಿನಂತಾಗಿರುವ ನಾಯಕ ರೋಹಿತ್ ಶರ್ಮಾ